Government have passed an order saying that it was found inadvisable to cancel the octroi duty and so on.

ಶ್ರೀ ಬಿ. ಸಿ. ನಂಜುಂಡಯ್ಯ.—ನನ್ನ ಪ್ರಶ್ನೆ ಏನೆಂದರೆ, immediate ಆಗಿ export ಆಗುವುದು ಎಂದರೆ ಒಂದು time limit ಇದೆ. 16 ಘಂಟೆ ಹಾಕಿದ್ದಾರೆ. ಅಷ್ಟರಲ್ಲಿ ವ್ಯಾಗನ್ ಅಲಾಟ್‌ಮೆಂಟ್ ಆಗದೆ, ಯಾರದೋ ತಪ್ಪಿಗೆ ರೈತರು ಆಕ್ಸ್ಯಾಯ್ ಕೊಡಬೇಕಾಗುತ್ತದೆ ಎಂಬುದನ್ನು ಯೋಚನೆ ಮಾಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ವ್ಯಾಗನ್ ಅಲಾಟ್‌ಮೆಂಟ್ ವಿಷಯದಲ್ಲಿ ನಿಧಾನವಾಗುತ್ತದೆ ಎಂದು ರೈತರು ರೆಪ್ರಸೆಂಟೇಷನ್ ಮಾಡಿದ್ದಾರೆ. ಚೀಫ್ ಮಾರ್ಕೆಟಿಂಗ್ ಆಫೀಸರು ಕೂಡ ಇದರ ವಿಷಯದಲ್ಲಿ ಸರ್ಕಾರದವರಿಗೆ ಕಾಗದ ಬರೆದಿದ್ದಾರೆ. ಇವೆರಡನ್ನೂ ಇಟ್ಟುಕೊಂಡು ಪರಿಶೀಲನೆ ಮಾಡುತ್ತೇವೆ.

Backward Communities (Direct Recruitment of Probationers).

Q.—309. **Sri M. MADIAH** (Nanjangud—Scheduled Castes).—

Will the Government be pleased to state :—

(*a*) whether they have decided to appoint Probationary Assistant Commissioners, Revenue Probationers, Accounts Probationers and such other probationary officers by direct recruitment to some other departments in the State from among the candidates belonging to the Depressed Classes and Backward Communities in the State ;

(*b*) if the answer to (*a*) *supra* is in the affirmative, the action taken by the State Government and the State Public Service Commission in this behalf to make these appointments from among the Backward Communities which are not adequately represented in the State services as envisaged in the Indian Constitution ?

A.—**Sri Kadidal MANJAPPA** (Minister for Revenue and Public Works).—

(*a*) The matter is under consideration. Eighteen Probationers in the Medical Department, 5 Probationers in the Health Department and 35 Probationers in Public Works Department were taken recently. The question of taking a few more in the Health Department is also under consideration of Government.

With regard to the representation of Depressed Classes, Government have already passed order making provision for reservation up to 16⅔ per cent in the case of direct recruitment. With regard to Backward Classes, it has always been the policy of the Government to give them representation in the services.

(*b*) *Vide* answer to (*a*) above.

ಶ್ರೀ ಎಂ. ಮಾದಯ್ಯ.—ಸರ್ಕಾರಿ ನೌಕರಿಗಳಲ್ಲಿ ಸಾಕಾದಷ್ಟು ಪ್ರಾತಿನಿಧ್ಯವಿಲ್ಲದೇಯಿರುವ ನಿಮ್ನತರ ಗತಿಯವರಿಗೂ ಹಿಂದುಳಿದ ಪಂಗಡಗಳವರಿಗೂ ಸಾಕಷ್ಟು ಪ್ರಾತಿನಿಧ್ಯ ದೊರಕಿಸಲು ಯಾವ ಯಾವ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಮತ್ತು ಎಷ್ಟು ದಿವಸಗಳಿಂದ ನಡೆಯುತ್ತಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಮೈಸೂರು ಸಂಸ್ಥಾನದಲ್ಲಿ ನಿಮ್ನ ತರಗತಿಯವರಿಗೂ ಹಿಂದುಳಿದ ಪಂಗಡದವರಿಗೂ ತಕ್ಕಷ್ಟು ಪ್ರಾತಿನಿಧ್ಯ ಕೊಡಬೇಕೆಂಬ ತತ್ವವನ್ನು ಬಹಳ ದಿವಸಗಳಿಂದ ಇಟ್ಟುಕೊಂಡು ಬಂದಿದ್ದೇವೆ.

ಶ್ರೀ ಎಂ. ಮಾದಯ್ಯ.—ಹಾಗಾದರೆ ಭಾರತ ರಾಜ್ಯಾಂಗ ಜಾರಿಗೆ ಬಂದಾಗಿನಿಂದೀಚೆಗೆ ಯಾವ ಯಾವ ಕೋಮಿಗೆ ಸಾಕಷ್ಟು ಪ್ರಾತಿನಿಧ್ಯವಿಲ್ಲವೆಂದು ತೀರ್ಮಾನ ಮಾಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ನದಸ್ಯರಿಗೇ ಗೊತ್ತಿದೆ. ಇಲ್ಲಿ ಆ ಪಟ್ಟಿ ನನ್ನಲ್ಲಿಲ್ಲ. ಹಿಂದೆ ಒಂದು ಪಟ್ಟಿಯನ್ನು ಕೊಡಲಾಗಿತ್ತೆಂದು ನನ್ನ ನೆನಪು. ಈಗ ನದ್ಯದಲ್ಲಿ ಆ ವಿವರಗಳು ನನ್ನಲ್ಲಿಲ್ಲ.

ಶ್ರೀ ಎಂ. ಮಾದಯ್ಯ.—'The matter is under consideration' ಎಂದು ಉತ್ತರದಲ್ಲಿ ತಿಳಿಸಲಾಗಿದೆ, ಯಾವ ಯಾವ ಇಲಾಖೆಗಳಲ್ಲಿ ತೆಗೆದುಕೊಳ್ಳಬೇಕೆಂದಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ರೆವೆನ್ಯೂ ಇಲಾಖೆಗೆ ರೆವೆನ್ಯೂ ಪ್ರೊಬೇಷನರುಗಳನ್ನು ತೆಗೆದುಕೊಂಡಿದ್ದೇವೆ.

ಶ್ರೀ ಎಂ. ಮಾದಯ್ಯ.—ನಾನು ಎಲ್ಲಾ ಇಲಾಖೆಗಳ ವಿಷಯವನ್ನೂ ಕೇಳಿದ್ದೇನೆ. ಎಲ್ಲಾ ಇಲಾಖೆಗಳಲ್ಲಿಯೂ ಪ್ರೊಬೇಷನರುಗಳನ್ನು ನೇಮಕಮಾಡಬೇಕೆಂದಿದೆಯೋ ಅಥವಾ ರೆವೆನ್ಯೂ ಇಲಾಖೆಯಲ್ಲಿ ಮಾತ್ರವೊ ?

ಶ್ರೀ ಕಡಿದಾಳ್ ಮಂಜಪ್ಪ.—ಉತ್ತರದಲ್ಲಿ ವಿವರಗಳನ್ನು ಕೊಡಲಾಗಿದೆ. ಪಬ್ಲಿಕ್ ವರ್ಕ್ಸ್, ಪಬ್ಲಿಕ್ ಹೆಲ್ತ್ ಮತ್ತು ಮೆಡಿಕಲ್ ಇಲಾಖೆಗಳಲ್ಲಿ ಇತ್ತೀಚೆಗೆ ಪ್ರೊಬೇಷನರುಗಳನ್ನ ತೆಗೆದುಕೊಂಡಿದ್ದೇವೆ. ಬಾಕಿ ಯಾವ ಯಾವ ಇಲಾಖೆಗಳಲ್ಲಿ ತೆಗೆದುಕೊಳ್ಳಬೇಕೆಂಬ ವಿಷಯ ಪರಿಶೀಲನೆಯಲ್ಲಿದೆ.

ಶ್ರೀ ಎಂ. ಮಾದಯ್ಯ.—ಈಗ ತೆಗೆದುಕೊಂಡಿರುವ ವರಲ್ಲಿ, ಸಾಕಷ್ಟು ಪ್ರಾತಿನಿಧ್ಯವಿಲ್ಲದೇಯಿರುವ ಪಂಗಡದವರಿಗೆ ಅವಕಾಶ ಕೊಡಲಾಗಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಕಷ್ಟು ಪ್ರಾತಿನಿಧ್ಯವಿಲ್ಲದೇಯಿರುವ ಪಂಗಡದವರಿಗೆ ಕೊಡಲಾಗಿದೆ. ಪಬ್ಲಿಕ್ ಸರ್ವಿಸ್ ಕಮಿಷನರವರು ಎಲ್ಲವನ್ನೂ ಗಮನಕ್ಕೆ ತೆಗೆದುಕೊಂಡು, ಯಾವ ಯಾವ ಪಂಗಡದವರಿಗೆ ಸರಿಯಾದ ಪ್ರಾತಿನಿಧ್ಯವಿಲ್ಲವೆಂಬುದನ್ನು ಗಮನಿಸಿ ಅವರಿಗೆ ಅವಕಾಶ ಕೊಟ್ಟಿದ್ದಾರೆ.

ಶ್ರೀ ಎಂ. ಮಾದಯ್ಯ.—ಪಬ್ಲಿಕ್ ಸರ್ವಿಸ್ ಕಮಿಷನವರು ಈ ವಿಚಾರದಲ್ಲಿ ಏನಾದರೂ ಅಭಿಪ್ರಾಯವನ್ನು ಸೂಚಿಸಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ನಿರ್ಣಯವು ಈ ಸಭೆಯಲ್ಲಿ ಅಂಗೀಕಾರವಾಗಿದೆ. ಮೊನ್ನೆ ನಾನು ತಿಳಿಸಿದ ಹಾಗೆ ಅದನ್ನು ಯಾವ ರೀತಿ ಕಾರ್ಯಗತ ಮಾಡಬೇಕೆಂಬ ಬಗ್ಗೆ ನಲಹೆ ಕೊಡಬೇಕೆಂದು ಪಬ್ಲಿಕ್ ಸರ್ವಿಸ್ ಕಮೀಷನವರನ್ನು ಕೇಳಿದ್ದೇವೆ.

ಶ್ರೀ ಎಂ. ಮಾದಯ್ಯ.—ಈ ವಿಷಯದಲ್ಲಿ ರೂಲ್ಸ್ ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅವರಿಂದ ನಲಹೆ ಬಂದಮೇಲೆ ಮಾಡುತ್ತೇವೆ.

ಶ್ರೀ ಎಂ. ಮಾದಯ್ಯ.—ಜಾಗ್ರತೆ ಅವರಿಂದ ನಲಹೆ ತರಿಸುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದಷ್ಟು ಜಾಗ್ರತ ಮಾಡುತ್ತೇವೆ.

Kasaba Hobli of Hosadurga Taluk (Bifurcation into Kasaba and Bagur)

Q.—393. Sri G. BASAPPA (Hosadurga).—

Will the Government be pleased to state:—

(*a*) the number of villages in Kasaba Hobli of Hosadurga Taluk;

(*b*) whether there are any representations from the public for the bifurcation of Kasba Hobli into Kasba and Bagur;

(*c*) since how long these petitions are pending with the Government and the action taken in the matter ?

A.—Sri Kadidal MANJAPPA (Minister for Revenue and Public Works).—

(*a*) 85 villages.

(*b*) Yes. Representations have been received from Seva Sangha, Bagur.

(*c*) Not pending with Government but pending since March 1953 in the District Office for examination.

ಶ್ರೀ ಜಿ. ಬಸಪ್ಪ.—ಒಬ್ಬ ರೆವೆನ್ಯೂ ಇನ್‌ಸ್ಪೆಕ್ಟರು 85 ಹಳ್ಳಿಗಳನ್ನು ಒಮ್ಮೆಯಾದರೂ ವಿಸಿಟ್ ಮಾಡ ಬೇಕಾದರೆ ಎಷ್ಟು ದಿವಸವಾಗುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಅವನ ದೇಹ ದಾರ್ಢ್ಯ, ಆ 85 ಹಳ್ಳಿಗಳ ವಿಸ್ತೀರ್ಣ ಮುಂತಾದು ವುಗಳನ್ನವಲಂಬಿಸಿದೆ; ಅದನ್ನು ನಾನು ನಿರ್ಧರವಾಗಿ ಹೇಳಲಾರೆ.

ಶ್ರೀ ಜಿ. ಬಸಪ್ಪ.—ಒಬ್ಬ ರೆವೆನ್ಯೂ ಇನ್‌ಸ್ಪೆಕ್ಟರು 85 ಹಳ್ಳಿಗಳನ್ನು ನೋಡಿ ಅಲ್ಲಿಯ ರೈತರ ಕಷ್ಟ ಸುಖ ಗಳನ್ನು ನೋಡಿಕೊಳ್ಳುವುದು ಬಹಳ ಕಷ್ಟವೆಂಬುದು ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಇದು ಪ್ರಶ್ನೆಯ ರೂಪದಲ್ಲಿ ಬಂದದ್ದರಿಂದ ನನ್ನ ಗಮನಕ್ಕೆ ಬಂದಿದೆ; ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಜಿ. ಬಸಪ್ಪ.—Bifurcation ಮಾಡಲು administrative difficulty ಏನಾದರೂ ಇದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಒಂದು ಹೋಬಳಿಯ ಹಳ್ಳಿಯನ್ನು ಇನ್ನೊಂದಕ್ಕೆ ಸೇರಿಸುವುದಕ್ಕೆ ಕಷ್ಟ ವಿರುತ್ತದೆ. ರಿಕಾರ್ಡುಗಳನ್ನೆಲ್ಲಾ ಹಂಚಬೇಕಾಗು ತ್ತದೆ. ಇದರಿಂದ ಈ ವಿಷಯ ಪರಿಶೀಲನೆಯಲ್ಲಿದೆ.

ಶ್ರೀ ಜಿ. ಬಸಪ್ಪ.—ಹಿಂದೆ ಕೂಡ ಇದನ್ನು ಮಾಡ ಬೇಕೆಂದು ಮನವಿಮಾಡಿಕೊಂಡಿರಲಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಪರಿಶೀಲನೆಮಾಡು ತ್ತೇವೆಂದು ಹೇಳಿದ್ದೇನೆ.

Tank Project in Manchaldore Forest Area.

Q.—462. Sri B. C. NANJUNDAIYA (Kora).—

Will the Government be pleased to state:—

(*a*) whether there is a proposal to build a tank in Manchaldore Forest area in Kagalvadi Hobli, Gubbi Taluk, Tumkur District;

(*b*) the number of estimates, if any, with details in this respect;

(*c*) the duration of time taken to prepare these estimates;

(*d*) whether it is not a fact that an observation is made by Sri Ramamurthy Committee about the necessity of having a Project in this area;

(*e*) whether the estimate or estimates are prepared as per the Committee's observation ?

A.—Sri Kadidal MANJAPPA (Minister for Revenue and Public Works).—

(*a*) Yes, in respect of 3 tanks.

(*b*) Three.

(i) Tank across Mattadahalla near Matta is estimated to cost Rs. 1.45 lakhs to irrigate 168 acres.

(ii) Tank across Hirehalla is estimated to cost Rs. 2·00 lakhs to irrigate 120 acres.

(iii) Tank near Yerabahalli is estimated to cost 4·50 lakhs to irrigate 480 acres. An alternative estimate at a lower site for the same work is also got up for Rs. 6·20 lakhs to irrigate 480 acres.

(*c*) About 4 months.

(*d*) No.

(*e*) Does not arise in view of reply to (*d*).

ಶ್ರೀ ಬಿ. ಸಿ. ನಂಜುಂಡಯ್ಯ.—(ಡಿ) ಭಾಗಕ್ಕೆ ಉತ್ತರವಾಗಿ ಇಲ್ಲವೆಂದು ಹೇಳಿದ್ದೀರಿ, ರಾಮಮೂರ್ತಿ ಕಮಿಟಿಯವರು ಆ ಪ್ರದೇಶದಲ್ಲಿ ಸಂಚಾರ ಮಾಡಿದ್ದು ತಮಗೆ ಗೊತ್ತಿದೆಯೆ ?